## ಅನಾಥವಾಯಿತೆ ಎಚ್‌.ಎನ್‌. ಮನೆ?

ಎಚ್. ನರಸಿಂಹಯ್ಯನವರ ಜನ್ಮಶತಮಾನದ ವರ್ಷದಲ್ಲಿ ನಾಡು ಅವರನ್ನು ನೆನಸಿಕೊಳ್ಳುತ್ತಿದೆ. ಗೌರಿಬಿದನೂರು ತಾಲ್ಲೂಕು ಹೊಸೂರಿನಲ್ಲಿರುವ ಅವರ ಜನ್ಮಸ್ಥಳ ಮಾತ್ರ ಅನಾಥವಾಗಿರುವುದು ವ್ಯಥೆಯ ಸಂಗತಿ. ಮನೆ ಪ್ರವೇಶದಲ್ಲಿ ಪದ್ಮಭೂಷಣ ನಾಡೋಜ ಡಾ. ಎಚ್. ನರಸಿಂಹಯ್ಯನವರು ಹುಟ್ಟಿದ ಮನೆ ಎಂಬ ಫಲಕ ಇದೆ. ಮನೆಯ ಒಳಭಾಗದ ತೊಲೆಗಳು ಮುರಿದು ಬೀಳುವಂತಿವೆ. ಈಡೀ ಮನೆಗೆ ಒಂದು ಕಂಬ ಆಧಾರವಾಗಿದೆ. ನೆಲ ತನ್ನ ಮೂಲ ಸ್ವರೂಪವನ್ನೇ ಕಳೆದುಕೊಂಡಿದೆ. ಈ ಮನೆ ತನ್ನ ಅಸ್ತಿತ್ವವನ್ನು ಪೂರ್ಣ ಕಳೆದುಕೊಳ್ಳುವ ಮುನ್ನ ಸಂರಕ್ಷಿಸಿದರೆ ಮುಂದಿನ ತಲೆಮಾರಿಗೂ ಎಚ್.ಎನ್. ಹುಟ್ಟಿ ಬೆಳೆದ ಮನೆಯನ್ನು ಉಳಿಸಲು ಸಾಧ್ಯ.

—ಶ್ರೀನಿವಾಸ ಮೂರ್ತಿ ಎನ್.ಎಸ್.





## ತುಮರಿ ಹಣ್ಣಿನ ರುಚಿ

ಸಪೋಟಾ (ಚಿಕ್ಕು) ಹಣ್ಣಿನ ರುಚಿಯನ್ನೇ ಹೋಲುವ ಕಾಡು ಹಣ್ಣು 'ತುಮರಿ'. ಪಶ್ಚಿಮಘಟ್ಟ, ಮಲೆನಾಡಿನ ಕಾಡಿನಲ್ಲಿ ಈ ಜಾತಿಯ ಮರಗಳನ್ನು ಕಾಣಬಹುದು. ಎಲ್ಲ ಮರಗಳೂ ಪ್ರತಿವರ್ಷವೂ ಕಾಯಿ ಬಿಡುವುದಿಲ್ಲ. ಬೇರೆ ಬೇರೆ ಪ್ರದೇಶಗಳಲ್ಲಿ ಈ ಜಾತಿಗೆ ತುಂಬುರು, ತುಮರಿ, ತುಂಬ್ರಿ, ಬೀಡಿ ಮರ ಎಂದು ಕರೆಯುತ್ತಾರೆ. ಇದರ ಎಲೆಯನ್ನು ಬೀಡಿಗಳನ್ನು ಕಟ್ಟಲು ಬಳಸುವುವುದರಿಂದ 'ಬೀಡಿ ಎಲೆ' ಮರ ಎಂದೂ ಹೆಸರಿದೆ.

ಈ ಮರದ ಹಣ್ಣು ಎರಡು ಕಪ್ಪು ಬೀಜಗಳನ್ನು ಹೊಂದಿದ್ದು ಸಪೋಟದಂತೆಯೇಕಾಣಿಸುತ್ತದೆ. ಅದರ ತಿರುಳು ತಿನ್ನಲು ರುಚಿ. ಒಗರು ಮಿಶ್ರಿತ ಸಿಹಿ ಹಣ್ಣುನ್ನು ಹಾರ್ನ್‌ಬಿಲ್ ಹಕ್ಕಿಗಳು ತಮ್ಮ ಮರಿಗಳಿಗೆ ಕಾಳಜಿಯಿಂದ ತೆಗೆದುಕೊಂಡು ಹೋಗುತ್ತವೆ.

—ಅರ್ಚನಾ ಬೊಮ್ನಳ್ಳಿ, ಶಿರಸಿ

## ಸೌಂದರ್ಯದ ಕಲ್ಯಾಣಿ

ಗುಜರಾತಿನ ಅಹಮದಾಬಾದ್ ಸಮೀಪದ ಅದಲಾಜ ಗ್ರಾಮದಲ್ಲಿರುವ ಕಲ್ಯಾಣಿಯು ಮರಳುಗಲ್ಲಿನಲ್ಲಿ ಶಿಲ್ಪಕಲಾ ಸೌಂದರ್ಯವನ್ನು ಭಟ್ಟಿ ಇಳಿಸಿದಂತೆ ನಿಂತಿದೆ. ಸೋಲಂಕಿ ವಾಸ್ತುಶೈಲಿಯಲ್ಲಿ ಹದಿನೈದನೇ ಶತಮಾನದಲ್ಲಿ ನಿರ್ಮಾಣಗೊಂಡ ಈ ಸೋಪಾನಕೊಳ (ಕಲ್ಯಾಣಿ) ಐದು ಅಂತಸ್ತುಗಳ ಕೆಳಭಾಗದಲ್ಲಿ ನೀರಿನ ನೆಲೆ ಹೊಂದಿದೆ. ಮೇಲ್ಭಾಗದಲ್ಲಿ ಅಷ್ಟಕೋನಾಕೃತಿಯ ರಚನೆ ಹೊಂದಿದೆ. ಸಂಕೀರ್ಣ ಕುಸುರಿ ಕಲಾ ಕೆತ್ತನೆಯ ಹಲವಾರು ಕಂಭಗಳನ್ನು ಹೊಂದಿದೆ. ಪ್ರತಿ ಅಂತಸ್ತು ಕೂಡ ವಿಶಾಲವಾಗಿದೆ. ಹಿಂದೆ ವ್ಯಾಪಾರ ಮಾರ್ಗದಲ್ಲಿ ಸಂಚರಿಸುತ್ತಿದ್ದ ವರ್ತಕರು, ಕ್ಯಾರವಾನ್‌ಗಳು ಇಲ್ಲಿ ತಂಗುತ್ತಿದ್ದರಂತೆ. ಧಾರ್ಮಿಕ ಕಾರ್ಯಗಳು, ಹಬ್ಬಗಳು ಕೂಡ ಇಲ್ಲಿ ನೆರವೇರುತ್ತಿದ್ದವು.

—ಕೆ.ಆರ್.ಉಮಾದೇವಿ ಉರಾಳ ತೀರ್ಥಹಳ್ಳಿ

